ವಿಷಯ : 1995ರಿಂದ ರಾಜ್ಯದಿಂದ ವಿದೇಶ ಪ್ರವಾಸ ಮಾಡಿದ ಸಚಿವರು ಮತ್ತು ಅಧಿಕಾರಿಗಳು.

254 (2109)-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟ್)

ಶ್ರೀ ಜಗದೀಶ್‌ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಶ್ರೀ ಯು. ಆರ್. ಸಭಾಪತಿ (ಉಡುಪಿ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96 ಜನವರಿಯಿಂದ 1996-97ರ ಜೂನ್‌ವರೆವಿಗೆ ಕರ್ನಾಟಕ ರಾಜ್ಯದಿಂದ ವಿದೇಶಗಳಿಗೆ ಪ್ರವಾಸ ಹೋದ ಮಂತ್ರಿಗಳ ಸಂಖ್ಯೆ ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು

ಆ) ಈ ಮಂತ್ರಿಗಳು ಯಾವ ಯಾವ ಇಲಾಖೆಗಳಿಗೆ ಸಂಬಂಧಪಟ್ಟವರು ಹಾಗೂ ಯಾವ ಕಾರಣಗಳಿಗಾಗಿ ವಿದೇಶ ಪ್ರವಾಸ ಹೋಗಿ ಬಂದಿದ್ದಾರೆ.

ಇ) ಈ ವಿದೇಶಿ ಪ್ರವಾಸಗಳಿಂದ ರಾಜ್ಯಕ್ಕೆ ಆಗಿರುವ ಅನುಕೂಲಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು)

ಅ) ಮಂತ್ರಿಗಳು 19

ಅಧಿಕಾರಿಗಳು 146

ಆ) ಈ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇವುಗಳ ವಿದೇಶ ಯಾತ್ರೆಗಳು ಪರಿಣಾಮಕಾರಿಯಾಗಿ ಆಡಳಿತವನ್ನು ಕರ್ನಾಟಕ ಜನತೆಗೆ ನೀಡುವಲ್ಲಿ ಮತ್ತು ಸರ್ಕಾರದ ಆಡಳಿತವನ್ನು ಚುರುಕು ಗೊಳಿಸುವಲ್ಲಿ ಹಾಗೂ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಯೋಜನೆಗಳ ಅನುಷ್ಠಾನದಲ್ಲಿ ಸಹಾಯಕವಾಗಿವೆ.

ANNEXURE

Statement Showing the Details of the Foreign Tours of the The year 1995-96 January to 1996-97 June.

Sl. No.	Name of the Minister Shriyuths/Smt.	Purpose
1	2	3
1.	H.D Devegowda Chief Minister R. V. Deshpande, Minister for Large & Medium Industries.	To Participate in the 1995 Annual meeting of the Members of the World Economic Forum held at Davos, Switzerland from 28-01-95 to 29-01-95 and toTel Aviv, Israel to Study modern Agricultural practices adopted in the country.
2.	J. H. Patel, Deputy Chief Minister	To Participate in the Workshop on "Investment oppertunities in Tourism in Karnataka and promotion of Tourism between singapore and Malaysia from 14-02-95 to 21-02-95.
3.	J. H. Patel Deputy Chief Minister R. V. Deshpande Minister for Large & Medium Industries	To participate in the Seminar "Industrial Development of Karnataka" From 29-04-95 to 03-05-95
4.	S. D. Jayaram, Minister for Mines & Geology	To Participate in the International Trade Fair Exhibitions on natural stone & Stone processing technology and to London to meet the Trade Authorities of U. K., in respect of improvements of trade links from 14-05-95 to 28-05-95.
5.	Ajayakumar Sarnaik, Minister of State for Youth Services & Sports	To gain experience in the field of administration and also in connection with national Games, to Sweden, Germany and U.S.A., from 11-08-95 to 25-08-95.

1	2	3
6.	B. N. Bachegowda, Minister of State for Animal Husbandry	To Gain Knowledge of the Australian meat processing and Dairy Develoipment, to Australia from 30-10-95 to 15-11-95.
7.	H. C. Mahadevappa, Minister for Health & Family welfare	To attend the 1995 annual meeting of International Union against TB & Lung Diseases at Paris and also to London from 08-09-95 to 16-09-95.
8.	H. D. Devegowda, Chief Minister R. V. Deshpande, Minister for Large & Medium Industries & Roshan Baig, Minister of State for Bangalore City Development & Wakfs.	To discuss ways to promote further bilateral trade and investment ties from 24-07-95 to 23-07-95, to singapore.
9.	N. M. Nabi, Minister for small Scale Industries	To Study the model amenities and other infrastructure provided for the growth of small scale Industries, to Japan, Singapore & Hongkong from 22-10-95 to 03-11-95.
10.	Siddaramaiah, Minister for Finance & Planning	To attend the "Global Business opportunity by convention 1995" at Osaka, Japan and Hongkong from 21-10-95 to 30-10-95.
11.	N. M. Nabi Minister for Small Scale Industries	To attend the International Trade Promotion organisation at Dubai and Saudi Arabia From 12-12-95 to 18-12-95.

1	2	3
12.	Roshan Baig, Minister of State for Bangalore City Development & Wakfs	To Supervise the arrangements for Haz Season to saudi Arabia from 09-02-96 to 16-02-96.
13.	C. Byregowda, Minister for Agriculture & D. T. Jayakumar Minister of State for Horticulture	1996-97 To attend the 13th insternational Agri tech Exhibition held at tel Aviv, Isreal from 12-05-96 to 16-05-96.
14.	R. V. Deshpande Minister for Large & Medium Industries	To attend the Globa Indian Entreprenours conference - 1996 held at Singapore form 19-06-96 to 21-06-96.
15.	Leeladevi R. Prasad, Ministerf of State for Minor Irrigation	To attend the International Co-operative Alliance held at Manchester, U. K., from 19-09-95 to 24-09-95.
16.	C. Byregowda, Minister for Agriculture D. T. Jayakumar, Minister of State for Horticulture.	To Study the Development made by the Israeli Government, in the field of Agriculture, Horticulture & Irrigation, to Israel from 16-07-96 to 23-07-96.
17.	R. Roshan Baig Minister for Home & Wakfs	To Study the System of prevention and control of Crimes and to get an exposure to traffic management and road safety, to Isrea, France & U. K. from 25-08-96 to 05-09-96.
18.	Leeladevi R. Prasad, Minister of State for Kannada & Culture and Tourism	To participate in the "Asia Travel Market 96" held at Singapore from 24-10-96 to 26-10-96.
19.	Sharanabasappa Darshanapur,	To facilitate discussion with M/s. Voest Alpines, Austria & M/s. V. A. Tech Finance

1	2	3
	Minister of State for power	(Ireland) Ltd., regarding Setting up of a Power House at Sarapadi Barage Hydro Electric Project, Managalore, to Austria, Switzerland and France from 23-11-96 to 04-12-96.
20.	M. P. Prakash Minister for Rural Development & Panchayat Raj	To Study the implementation of Rural water supply and Invironmental Sanitation project, adjopted by Indonesia, Philippines & Thailand, from 25-11-96 to indonesia, Philippines & Thailand.
21.	R. V. Deshpande, Minister for large & Medium Industries	To Seek investment in Industries, Infrastructure and Mining, to Australia and Canada from 29-11-96 to 13-12-96.
22.	R. Roshan Baig, Minister of State for Home & Wakfs	In order to look into the Complaints of the Hai filgrims from Karnataka, Visited Mecoa & madina from 27-02-97 to 04-03-97.
23.	M. S. Patil, Minister for Textiles	To attract investment to the Textile Sector, Visited Indonesia, Japan and Germany from 05-04-97 to 18-04-97.
24.	B. Somashekar, Minister for Higher Education	To participate in a tour programme of Selected Community Colleges and to meet with elected representative and Sr. Govt. Official in-charge of technical Education in Canada, U.S.A. and U.K., from 24-04-97.
25.	R. Roshan Baig, Minister of State for Home & Wakfs	In order to look into the complaints of the Haj pilgrims from Karnataka, visited Mecca and Madina from 27-02-97 to 04-03-97.

1	2	3
26.	Siddaramaiah, Deputy Chief Minister	To Study VAT System and also to hold discussion with World Bank, Visited U.K., Belgium, France, Canada and U.S.A., from 27-05-97 to 15-06-97
27.	P. G. R. Sindhia, Minister for Transport	To attend International Union of Public Transport Congress, 1997 and to discuss with Volvo Authorities, Visited Germany, Sweden and U. K., from 01-06-97.
28.	J. H. Patel, Chief Minister R. V. Deshpande, Minister for large & Medium Industries M. C. Nanaiah,Minister for Law &Parliamentary Affairs and Information & Publicity.	To attract foreign investment to Karnataka, Visited U.S.A., and U.K., from 14-06-97 to 27-06-97.

ಶ್ರೀ ಹೆಚ್. ಡಿ. ಬಸವರಾಜು : ನಾವು ಕೇಳಿರುವಂಥ ಪ್ರಶ್ನೆಗೆ ಕತ್ತರಿ ಪ್ರಯೋಗವಾಗಿದೆ. ನಮ್ಮ ಪ್ರಶ್ನೆಯೇ ಇಲ್ಲಿ ಅಚ್ಚಾಗಿಲ್ಲ. ವಿದೇಶ ಪ್ರವಾಸಕ್ಕೆ ರಾಜ್ಯ ಸರ್ಕಾರದ ಬೊಕ್ಕಸದಿಂದ ತಗಲಿರುವ ವೆಚ್ಚ ಎಷ್ಟು ತುಂಬ ಪ್ರಶ್ನೆಯನ್ನು ಬಿಟ್ಟುಬಿಟ್ಟಿದ್ದಾರೆ. ನಾವು ಎಕ್ಸ್‌ಪೆನ್ಸ್ ಬಗ್ಗೆ ಕೇಳಿದ್ದೇವೆ. ಅದರ ಬಗ್ಗೆ ಏನೂ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಾಕ್ಷರೆ, ತಮ್ಮಲ್ಲಿ ಒಂದು ಕೋರಿಕೆ. ಶ್ರೀಲಂಕಾ ಕ್ರಿಕೆಟ್ ಟೀಂನಲ್ಲಿ ಸನತ್ ಜಯಸೂರ್ಯ ಎಂದು ಒಬ್ಬ ಬ್ಯಾಟ್ಸ್‌ಮನ್ ಇದ್ದಾರೆ. ಅವರು ಬ್ಯಾಟಿಂಗ್ ಮಾಡಲಿಕ್ಕೆ ಶುರು ಮಾಡಿದರೆ ಬೇರೆ ಯಾರೂ ಬ್ಯಾಟಿಂಗ್ ಮಾಡಲು ಅವಕಾಶ ಸಿಗುವುದಿಲ್ಲ. ಹಾಗೆ ಹಿರಿಯ ಸದಸ್ಯರು ಕೊನೆಗೆ 4ನೇ ಪ್ರಶ್ನೆಯನ್ನು ಕೇಳಿದರೆ ಕಿರಿಯರಿಗೆಲ್ಲಾ ಅನುಕೂಲವಾಗುತ್ತದೆ. He is Sanath Jayasurya of Karnataka Assembly

ಶ್ರೀ ಯು. ಆರ್. ಸಭಾಪತಿ : ವಸಂತ ಸಾಲಿಯಾನ ಅವರ 2109ನೇ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಪ್ರಶ್ನೆಯನ್ನೇ ಹಾರಿಸಿಬಿಟ್ಟಿದ್ದಾರೆ. ನಮ್ಮ ಪ್ರಶ್ನೆಯೇ ಇಲ್ಲ. ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಉಳಿದ ನಮ್ಮ 3 ಜನ ಸದಸ್ಯರ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಏನು ಇದೆ ಅದಕ್ಕೆ ಸವಿಸ್ತಾರವಾಗಿ ಉತ್ತರ ಕೊಡಲಿಕ್ಕೆ ಸರ್ಕಾರ ತಯಾರಿದೆ. ನಿಮ್ಮ ಪ್ರಸ್ನೆ ಏನು ಇದೆ ಅದಕ್ಕೆ ಉತ್ತರ ಕೊಡಿಸೋಣ, ನಿವೇ ಮೊದಲನೆಯದಾಗಿ ಕೇಳಿ.

ಶ್ರೀ ಯು. ಆರ್. ಸಭಾಪತಿ : ವಿದೇಶ ಪ್ರವಾಸದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ತಗಲಿದ ಒಟ್ಟು ಮೊತ್ತ ಎಷ್ಟು ಎಂಬುದನ್ನು ಹೇಳಬೇಕು. ಈಗ ಮಾಹಿತಿ ಕೊಡಬೇಕು.ಆದರೆ ಅವರು ಈಗ ಇಲ್ಲ ಮಾಹಿತಿ ತಂದು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಬಸವರಾಜು ಅವರೇ ತಾವು ಕೇಳಿ, ಅವರು ಹೇಳುತ್ತಾರೆ ಅವರು ಹೇಳಬೇಕಾದುದನ್ನು ನೀವೇ ಹೇಳಿದರೆ ಹೇಗೆ? ಅವರು ಹೇಳಿದ್ದನ್ನು ತಾವು ಹೇಳುವುದಕ್ಕೆ ಸ್ವಲ್ಪ ದಿವಸ ಕಾಯಿರಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರ ಪರವಾಗಿ ನಾವು ಕೇಳುತ್ತಿದ್ದೇವೆ. ವಿದೇಶ ಪ್ರವಾಸಕ್ಕೆ ಎಷ್ಟು ಖರ್ಚಾಗಿದೆ. ಎಂದು

ಶ್ರೀ ಹೆಚ್. ಡಿ. ಬಸವರಾಜು : ಸಭಾಧ್ಯಕ್ಷರೆ, 2901ನೇ ಪ್ರಶ್ನೆ ಕೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ. ಮುಖ್ಯಮಂತ್ರಿಗಳು ಉತ್ತರದಲ್ಲಿ ಒದಗಿಸಿಲ್ಲ. ಒಂದು ಪ್ರಶ್ನೆಯನ್ನು ನಾನು ಕಳುಹಿಸಿಕೊಟ್ಟಿದ್ದೆ. ಅದನ್ನು ಈ ಪ್ರಶ್ನಾವಳಿಯಲ್ಲಿ ಕಡಿತ ಮಾಡಿದ್ದಾರೆ. ಆದರೂ ಅದನ್ನೆ ಉಪಪ್ರಶ್ನೆಯಾಗಿ ಕೇಳುತ್ತಿದ್ದೇನೆ. ವಿದೇಶ ಪ್ರವಾಸಕ್ಕಾಗಿ ಮಾಡಿದ ವೆಚ್ಚ ಎಷ್ಟು? ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದಾಗಿ ತಾವು ವಿದೇಶ ಯಾತ್ರೆ ಮಾಡಿ ಅನುಭವ ಗಳಿಸಿಕೊಂಡಂಥ ಎಷ್ಟು ಜನ ಮಂತ್ರಿಗಳು ಅದೇ ಇಲಾಖೆಯಲ್ಲಿ ಪರಿಣಾಮಕಾರಿಯೊಗಿ ಮುಂದುವರೆಯುತ್ತಿದ್ದಾರೆ? ಏತಕ್ಕೆಂದರೆ ಕೆಲವು ಮಂತ್ರಿಗಳನ್ನು ಉದಾಹರಣೆಗೆ ಬಚ್ಚೇಗೌಡರು, ಎನ್. ಎಂ. ನಭಿ ಹಾಗೂ ರೋಷನ್‌ಬೇಗ್ ಅವರನ್ನು ಆ ಇಲಾಖೆಗಳಿಂದ ಬದಲು ಮಾಡಲಾಗಿದೆ. ಈ ಒಂದು ಪ್ರಶ್ನೆಗೂ ಅವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ವಿದೇಶ ಯಾತ್ರೆ ಮಾಡಿದ ಎಷ್ಟು ಅಧಿಕಾರಿಗಳು ಯಾವ ಉದ್ದೇಶಕ್ಕಾಗಿ ವಿದೇಶ ಯಾತ್ರೆ ಮಾಡಿದರು, ಆ ಉದ್ದೇಶಕ್ಕಾಗಿ ವಿದೇಶ ಯಾತ್ರೆ ಮಾಡಿ ಅನುಭವ ಪಡೆದು ಅದೇ ಇಲಾಖೆಯಲ್ಲಿ ಅವರು ಮುಂದುವರೆಯುತ್ತಿದ್ದಾರೆಯೇ? ಆ ರೀತಿ ಮುಂದುವರೆಯುತ್ತಿಲ್ಲ ಎಂದರೆ ಎಷ್ಟು ಜನ ಅಧಿಕಾರಿಗಳು ಆ ಇಲಾಖೆಯಲ್ಲಿ ಮುಂದುವರೆಯುತ್ತಿಲ್ಲ? ಇದರ ಬಗ್ಗೆ ನನಗೆ ಉತ್ತರ ಬೇಕಾಗಿದೆ.

ಶ್ರೀ ಜೆ. ಹೆಚ್. ಪಟೇಲ್ : ಅವರು ಕೇಳಿರುವ ಪ್ರಶ್ನೆ ಎಷ್ಟು ಜನ ಮಂತ್ರಿಗಳು ವಿದೇಶ ಯಾತ್ರೆಮಾಡಿದ್ದಾರೆ? ಏತಕ್ಕೆಮಾಡಿದ್ದಾರೆ ಮತ್ತು ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದ್ದಾರೆ. ಶ್ರೀ ದೇವೇಗೌಡರ ಕಾಲದಿಂದ ಹಿಡಿದು ಇಲ್ಲಿಯವರೆಗೆ ಒಟ್ಟು 19 ಜನ ಮಂತ್ರಿಗಳು ವಿದೇಶ ಯಾತ್ರೆ ಮಾಡಿದ್ದಾರೆ. ಕೆಲವು ಮಂತ್ರಿಗಳು ಮೂರು ನಾಲ್ಕು ಸಲ ಕಾರಣಾಂತರದಿಂದ ಹೋಗಬೇಕಾಗಿದೆ. ರೋಷನ್‌ಬೇಗ್‌ರವರು ಹಜ್ ಯಾತ್ರೆಪ್ರಯುಕ್ತ ಎರಡುಮೂರುಸಲ ಮಕ್ಕಾ ಮತ್ತು ಮದೀನಕ್ಕೆ ಹೋಗಿಬಂದಿದ್ದಾರೆ. ಇನ್ನು ಶ್ರೀ ದೇಶಪಾಂಡೆಯವರು ಕೆಲವು ಸೆಮಿನಾರ್‌ಗಳಿಗಾಗಿಅಂದರೆ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಅಥವಾ ಇಂಟರ್‌ನ್ಯಾಷನಲ್ ಇಂಡಸ್ಟ್ರಿಯಲ್ ಸೆಮಿನಾರ್‌ಇಂಥವುಗಳ ಆಹ್ವಾನದ ಮೇಲೆ ಕೈಗಾರಿಕಾ ಮಂತ್ರಿಗಳು ಹೋಗಿದ್ದಾರೆ. ವಿದ್ಯುಚ್ಛಕ್ತಿ ಬಗ್ಗೆ ಕೆಲವು ಮಾಹಿತಿಯನ್ನು ಪಡೆಯುವುದಕ್ಕೋಸ್ಕರ ವಿದ್ಯುತ್ ರಾಜ್ಯಸಚಿವರು ಹೋಗಿಬಂದಿದ್ದಾರೆ. ನಾನು ಒಂದು ಸಲ ಮಲೇಶಿಯಾ, ಸಿಂಗಾಪೂರ್‌ಗೆ ಹಾಗೂ ಕನ್ನಡ ಸಂಘದವರ ಆಹ್ವಾನದ ಮೇಲೆ ದುಬೈಗೆ ಕೂಡ ಹೋಗಿದ್ದೆ. ಇದು ಮೂರು ನಾಲ್ಕು ದಿವಸದ ಪ್ರವಾಸ. ಮೊನ್ನೆ ನಾನು ನಾಣಯ್ಯನವರು ಹಾಗೂ ದೇಶಪಾಂಡೆಯವರು 14 ದಿನಗಳ ವಿದೇಶ ಯಾತ್ರೆ

ಹೋಗಿದ್ದೆವು. ಅದರ ಉದ್ದೇಶ ಏನೆಂದರೆ ಕೇವಲ ವಿದೇಶಗಳನ್ನು ನೋಡುವುದಕ್ಕೋಸ್ಕರ ಅಲ್ಲ ಕೆಲವು ಕಂಪನಿಗಳೊಡನೆ ಕರ್ನಾಟಕ ಸರ್ಕಾರ ಆಗಲೇ ಕರಾರುಗಳನ್ನು ಮಾಡಿಕೊಂಡಿದ್ದು ಇನ್‌ವೆಸ್ಟ್‌ಮೆಂಟ್ ಪ್ರಾರಂಭವಾಗಿದೆ. ಅವುಗಳ ಬಗ್ಗೆ ಕೆಲವು ವಿವರಗಳನ್ನು ನಾವು ಮತ್ತು ಅವರು ತಿಳಿದುಕೊಳ್ಳಬೇಕಾಗಿತ್ತು. ಆದುದರಿಂದ ಲಂಡನ್, ವಾಷೀಂಗ್‌ಟನ್ ನ್ಯೂಯಾರ್ಕ್ ಮತ್ತು ಬಾಸ್ಟನ್ ಈ ನಗರಗಳಿಗೆ ಹಾಗೂ ವರ್ಲ್ಡ್ ಬ್ಯಾಂಕ್‌ಗೆ ಭೇಟಿ ನೀಡಿ ಸೆಮಿನಾರ್‌ಗಳನ್ನು ಅಟೆಂಡ್ ಮಾಡಿ ಫಲಪ್ರದವಾಗಿರತಕ್ಕ ಕಾರ್ಯಕ್ರಮಗಳಾಗಿವೆ. ನಾವು ಬರೀ ಚರ್ಚೆ ಮಾಡಿ ಸೈನ್ ಮಾಡಿ ಬಂದಿಲ್ಲ. These are the project which we have taken up and we are implementing.

ಅಧ್ಯಕ್ಷರು : ಅವರ ಪ್ರಶ್ನೆ ಏನು ಎಂದರೆ ನಮ್ಮ ಮಿನಿಸ್ಟರ್‌ಗಳಲ್ಲಿ ಕೆಲವರು ಟೂರ್ ಹೋಗಿ ಬಂದಿರುವವರು Either they are not continued as Ministers or if they are continued as Ministers the portfolios have been changed. Likewise, the Government officials who are a part of the tour, they are not holding the same offices. So the investment made on them to acquire that experience has become a waste, That they are questioning.

ಶ್ರೀ ಜೆ. ಹೆಚ್. ಪಟೇಲ್ : ಒಂದು ಮಾಹಿತಿಗೊಸ್ಕರ ಅಥವಾ ನಾಲೆಡ್ಜ್ ಇನ್‌ಫರ್ಮೇಷನ್ ತೆಗೆದುಕೊಳ್ಳುವುದಕ್ಕೋಸ್ಕರ ಹೋಗಿದ್ದರೆ ಆ ಮಂತ್ರಿಗಳು ಈ ಸಂಪುಟದಲ್ಲಿ ಇಲ್ಲದೇ ಇದ್ದರೆ ಅವರು ದೇವೇಗೌಡರ ಅನುಮತಿ ಪಡೆದು ಹೋಗಿಬಂದಿದ್ದರು. ಅವರ ಅನುಭವವನ್ನು ಯಾವ ರೀತಿ ಪಡೆದುಕೊಳ್ಳಬಹುದು ಎಂಬುದನ್ನು ತಾವು ಹೇಳಿದರೆ ನಾವು ಪಡೆದುಕೊಳ್ಳಬಹುದು. ಅವರೇನೂ ಎಲ್ಲೂ ಹೋಗಿಲ್ಲ. ಅಧಿಕಾರಿಗಳದ್ದು to some extent there has been a waste. I do agree.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ವಿರೋಧ ಪಕ್ಷದ ನಾಯಕರು. ತಾವು ಪ್ರತಿ ಸಲ ತಾವು ಎದ್ದುಬಿಟ್ಟರೆ ನಾನು ಒರಿಜಿನಲ್ ಪ್ರಶ್ನೆ ಕೇಳಿದವರಿಗೆ ಎಲ್ಲಿ ಅವಕಾಶ ಕೊಡುವುದಕ್ಕಾಗುತ್ತದೆ? ನೀವು ದಯವಿಟ್ಟು ನನ್ನೊಂದಿಗೆ ಸಹಕರಿಸಿ. You will have to kindly co-operate with the Chair.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪದೇ ಪದೇ ಹೇಳಬೇಕೆಂದು ನನ್ನ ಇಚ್ಛೆ ಇಲ್ಲ. ಪ್ರಶ್ನೆ ಏನು ಇದೆ ಎಂದರೆ ಶ್ರೀ ಯು. ಆರ್. ಸಭಾಪತಿಯವರು ಪ್ರಶ್ನೆಯನ್ನು ಹಾಕಿದ್ದಾರೆ. ಆದು ಅಚ್ಚಾಗಲಿಲ್ಲ, ಆ ಮಾತು ಬೇರೆ, ಮತ್ತೆ ಒಂದು ಇನ್‌ಫರ್ಮೇಷನ್ ಏನು ಎಂದರೆ 10 ಮಂದಿ ಮಂತ್ರಿಗಳು ಮತ್ತು 146 ಮಂದಿ ಅಧಿಕಾರಿಗಳು ಹೊರದೇಶಕ್ಕೆ ಏನು ಹೋಗಿದ್ದಾರೆ ಅವರ ವೆಚ್ಚ ಎಷ್ಟು? ಏನು ಖರ್ಚಾಗಿದೆ ಎಂದು ಪ್ರಶ್ನೆ ಹಾಕಿದ ಮೇಲೆ ಇದರ ಉತ್ತರ ಇರಬೇಕಲ್ಲಾ. ಈಗ ಕೇಳುವ ಉದ್ದೇಶ ಏನೆಂದರೆ ನಿಮ್ಮ ಇನ್‌ವೆಸ್ಟ್‌ಮೆಂಟ್ಸ್ ಏನು?

Mr. Speaker : I will clarify the position. ಲಿಜಿಸ್ಲೇಚರ್ ಸೆಕ್ರೆಟರಿಯೇಟ್‌ನಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದೇನೆಂದರೆ ಒಂದೇ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಎರಡು ಮೂರು ಮಂದಿ ಸದಸ್ಯರು ಕಳುಹಿಸಿದಾಗ ಅದನ್ನು ಕ್ಲಬ್ ಮಾಡಿ ಪ್ರಶ್ನೆಯನ್ನು ಪ್ರಿಂಟ್ ಮಾಡಿ ಎಂದು ಹೇಳಿದ್ದೇವೆ. It is not the mistake of the Government. It is a lapse committed by the Legislature. ಅದಕ್ಕೋಸ್ಕರ ನಾನು ಏನು ಮಾಡುತ್ತೇನೆ ಎಂದರೆ ಈಗ ಸರ್ಕಾರ ಉತ್ತರ ತಯಾರು ಮಾಡಿಲ್ಲದಿರುವುದರಿಂದ ನಾನು ನನ್ನ ಕಚೇರಿಯಿಂದ ಆಗಿರತಕ್ಕಂಥ ತಪ್ಪನ್ನು ಒಪ್ಪಿಕೊಂಡು ಈ ಪ್ರಶ್ನೆಯನ್ನು ಈಗ ತಡೆಹಿಡಿದು ಮುಂದೆ ಮುಖ್ಯಮಂತ್ರಿಗಳ ಪ್ರಶ್ನೆ ಯಾವಾಗ ಇರುತ್ತದೆ ಆಗ ನಾನೇ ವೈಯಕ್ತಿಕ ನಿಗಾ ವಹಿಸಿ ಅವರಿಗೆ ಯು.ಆರ್.ಸಭಾಪತಿಯವರು, ಬಸವರಾಜು ಅವರು ಕೊಟ್ಟಿರತಕ್ಕಂಥ ಎಲ್ಲಾ ವಿವರಗಳನ್ನೂ ಒಳಪಡಿಸಿ ಪ್ರಶ್ನೆಯನ್ನು ತರುತ್ತೇನೆ. ಅವತ್ತು ತೆಗೆದುಕೊಳ್ಳೋಣ. Let's have all detailed answers. It is a mistake committed by the legislature Secretariat. Not that. Let's admit it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಆ ತಪ್ಪನ್ನು ತಮ್ಮ ಮೇಲೆ ಹಾಕಿಕೊಳ್ಳುತ್ತಿದ್ದೀರಿ. ಇದು ತಮ್ಮ ದೊಡ್ಡಗುಣ. ನಾನು ಕೇಳಿದ್ದು ಏನೆಂದರೆ ನೇರವಾಗಿ ಈ ಪ್ರಶ್ನೆ ಇದ್ದಾಗ ಉಪ ಪ್ರಶ್ನೆ ಕೇಳುತ್ತಾರೆ ಎಂದು ತಯಾರು ಮಾಡಿಕೊಂಡು ಬರಬೇಕಾಗಿತ್ತಲ್ಲವೇ ? ಹೊರದೇಶಕ್ಕೆ ಪ್ರವಾಸ ಹೋಗುತ್ತಾರೆ ಎಂದರೆ ಎಷ್ಟು ಜನ ಹೋಗುತ್ತಾರೆ ಎಷ್ಟು ಖರ್ಚಾಗಿದೆ. This question arises out of that.

ಅಧ್ಯಕ್ಷರು : ನೀವು ಅನುಭವಸ್ಥರು. ಈ ಮೊದಲು ಆಡಳಿತದಲ್ಲಿದ್ದವರು. ಇಂಥ ವಿಚಾರದಲ್ಲಿಅವರಿಗೆ ಗೈಡ್ ಮಾಡಬೇಕು. You should have cordial relationship.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈಗ ತಾವು ಏನೇ ರಕ್ಷಣೆ ಕೊಟ್ಟರೂ ಅವರು ನಿಲ್ಲುವುದಕ್ಕೆ ಸಾಧ್ಯವಿಲ್ಲ. ಅವರು ಕೆಳಗೆ ಬೀಳುವವರೇ ನೀವು ಅವರಿಗೆ ರಕ್ಷಣೆ ಕೊಟ್ಟು ನಿಲ್ಲಿಸಬೇಕೆಂದರೂ ಅವರು ನಿಲ್ಲುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ನಾನು ಆ ಕೆಲಸವನ್ನು ಮಾಡುವುದಿಲ್ಲ.

He is a senior Leader. He stands on his stength. He is sufficiently strong. He stands on his own strength. Now let's hear Sri Nanjegowda. He wants to say something.

ಶ್ರೀ ಹೆಚ್. ಎನ್. ನಂಜೇಗೌಡ : ನಾವು ಪ್ರಶ್ನೆ ಕಳುಹಿಸುತ್ತೇವೆ. ಇಲ್ಲಿ ಓರಲ್ ಆನ್ಸರ್ ತೆಗೆದುಕೊಂಡು ನಪ್ಲಿಮೆಂಟರಿ ಪ್ರಶ್ನೆ ಹಾಕುವ ಉದ್ದೇಶವೇನು ?

Things that arises out of the main question should be answered correctly. The Government should come prepared to answer all these supplementaries.

Mr. Speaker : There is a point.

Sri H. N. Nanjegowda : this is a very relevant supplementary.

ಶ್ರೀ ಜೆ. ಹೆಚ್. ಪಟೇಲ್ : ನಾನು ಮೊನ್ನೆ ವಿದೇಶ ಪ್ರವಾಸಕ್ಕೆ ಹೋಗಿಬಂದ ತಕ್ಷಣ ಒಟ್ಟು ಎಷ್ಟು ಹಣ ಖರ್ಚಾಯಿತು ಎಂದು ಅಂದಾಜು ಮಾಡಿದ್ದೇನೆ. ಒಟ್ಟು 34,65,000 ರೂಪಾಯಿ ಖರ್ಚಾಗಿದೆ. ಎರಡು ವರ್ಷದ ಕೆಳಗೆ ಆಗಿರುವುದನ್ನುನಾನು ನಂತರ ತರಿಸಿಕೊಡುತ್ತೇನೆ ಮೊನ್ನೆ ನಮ್ಮ 3 ಜನ ಮಂತ್ರಿಗಳು ಮತ್ತು ಅಧಿಕಾರಿಗಳ ಊಟ ಉಪಚಾರ ಮತ್ತು ವಿಮಾನದ ಖರ್ಚು ಸೇರಿ ಒಟ್ಟು 34 ಲಕ್ಷ 65 ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾವು ಯಾವುದೋ ಒಂದನ್ನು ಕೇಳಲಿಲ್ಲ. ಒಟ್ಟು 19 ಜನ ಮಂತ್ರಿಗಳು ಹೋಗಿರುವ ವ್ಯವಸ್ಥೆ ಏನಿದೆ ಅವರೆಲ್ಲರ ಕಡತ ತಮ್ಮಲ್ಲಿ ಇರಬೇಕೆಂದು ಅರ್ಥ ಅಷ್ಟೆ

ಅಧ್ಯಕ್ಷರು : ಆದರೆ ಮಾನ್ಯ ಖರ್ಗೆಯವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತಾ ಉಪಪ್ರಶ್ನೆಗಳನ್ನು ಕೇಳುವ ವೇಳೆಗೆ ಇವನ್ನೆಲ್ಲಾ ಕೇಳುತ್ತಾರೆಂದು ಸರ್ಕಾರ ಸಿದ್ದವಾಗಿ ಬರಬೇಕಾಗಿತ್ತು. ಈ ಪ್ರಶ್ನೆ ಪ್ರಿಂಟ್ ಮಾಡುವ ವೇಳೆಗೆ ಆಚಾತುರ್ಯ ನಡೆದಿರುವುದು ನಮ್ಮ ಸಿಬ್ಬಂದಿ ಕಡೆಯಿಂದ ಆದನ್ನು ನಾನು ತಿದ್ದಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕ್ಷಮಿಸಿ, ನೀವು ಪದೇಪದೇ ಆ ಮಾತು ಹೇಳಬೇಡಿ. ಅದಿದ್ದರೂ ಕೂಡ, ನೇರವಾಗಿ this question arises out of that also. Whether you print it or not.

Mr. Speaker : The Government should the anticipate supplementaries and should come prepared. I am not denying that. But.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಇಲಾಖೆ ಬಗ್ಗೆ ಇಲ್ಲಿ ಯಾರೂ ಚರ್ಚೆ ಮಾಡುತ್ತಿಲ್ಲ. ಇದು ಬಹಳ ಪ್ರಾಮುಖ್ಯ ಪ್ರಶ್ನೆ, ಇದರ ಮೇಲೆ ಅನೇಕ ಉಪಪ್ರಶ್ನೆಗಳನ್ನು ಕೇಳುತ್ತೇವೆ ತಾನೇ ಇದೇನೂ ಹೊಸದಲ್ಲವಲ್ಲ.

ಅಧ್ಯಕ್ಷರು : ಅದಕ್ಕೇ ಈ ಪ್ರಶ್ನೆಯನ್ನು ನಾನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಡಿ, ತಮ್ಮ ಸಲಹೆ ಸರಿ ಇದೆ. ಮುಖ್ಯ ಮಂತ್ರಿಗಳ ಬಗ್ಗೆನಮಗೆ ಈಗ ಯೋಚನೆಯಾಗುತ್ತಿರುವುದು ಅವರ ಲೆಕ್ಕ ಅವರು ಹೇಳಿಬಿಟ್ಟರು, ಎಲ್ಲರ ಲೆಕ್ಕ ಅವರೇ ಬರೆದಿಟ್ಟುಕೊಳ್ಳಿ ಎಂದು ನಾವು ಹೇಳಿದೆವ? ಅದಕ್ಕಾಗಿ ಒಂದು ಇಲಾಖೆ ಇದೆ. ಇದು ಶೂನ್ಯವೇಳೆ ಪ್ರಶ್ನೆಯಲ್ಲ, 10 ದಿವಸ ಮುಂಚೆ ಕಳುಹಿಸಿರುತ್ತೇವೆ ನೀವು ಕೊಡುವ ಉತ್ತರದ ಆಧಾರದ ಮೇಲೆ ನಾವು ನಿಮ್ಮನ್ನು ತರಾಟೆಗೆ ತೆಗೆದುಕೊಳ್ಳುವರಿದ್ದೇವೆ. ಲಿಖಿತ ಮೂಲಕ ಕೊಟ್ಟರೆ ನಿಮ್ಮನ್ನು ಹಿಡಿದುಕೊಂಡು ಅಲ್ಲಾಡಿಸಬಹುದೆಂಬುದು ನಮ್ಮ ಅಪೇಕ್ಷೆ. ನೀವು ಜಾರಿಕೊಳ್ಳುವುದಕ್ಕೆ ನೋಡುತ್ತಿದ್ದೀರಿ, ಅದಕ್ಕೆ ದಯಮಾಡಿ ಸರಿಯಾದ ಉತ್ತರ ಕೊಡಿ.

ಅಧ್ಯಕ್ಷರು : ಮಾನ್ಯ ಬಸವರಾಜ್, ಈ ಪ್ರಶ್ನೆ ತಡೆಹಿಡಿಯುತ್ತಿದ್ದೇನೆ ಮತ್ತೆ ಮುಖ್ಯಮಂತ್ರಿಗಳ ಪ್ರಶ್ನೋತ್ತರ ಇರುವ ದಿವಸ ನೀವು ಯಾವ ರೀತಿ ಕೊಟ್ಟಿದ್ದೀರೋ ಪೂರ್ಣಪ್ರಶ್ನೆ ಅದೇ ರೀತಿ ನಾನೇ ಆಸಕ್ತಿವಹಿಸಿ ಅಚ್ಚು ಮಾಡಿಸುತ್ತೇನೆ. ಅವತ್ತು ಎಲ್ಲಾ ಉತ್ತರಗಳನ್ನು ಪಡೆದುಕೊಳ್ಳಬಹುದು. ಈಗ ಕಡೇ ಪ್ರಶ್ನೆ.